"ಅವನು ಹದಿನಾರು ವರ್ಷದ ಹಿಂದೆ ಭುವನೇಶ್ವರದಲ್ಲಿ ನಡೆದ ಬ್ಯಾಂಕ್ ದರೋಡೆಯಲ್ಲಿ ಭಾಗಿಯಾಗಿದ್ದ ಅಂತ ಶಿಕ್ಷೆ ಅನುಭವಿಸಿದ್ದ..."

"ಇರಬಹುದು... ಅವನ್ಯಾರೋ ನನಗೆ ಗೊತ್ತಿಲ್ಲ ..."

"ಆದರೆ ಅವನು ಆಗ ಮಾಡಿದ್ದ ಕಡೆಯ ಕಾಲ್ ನಿಮಗೇ... ಜಯರಾಂ... ಸಾರಿ, ಬಲರಾಂ ಮಹಾಪಾತ್ರ..."

ಜಯರಾಂನ ಮುಖ ಬಿಳುಚಿಕೊಂಡಿತು.

ಧನಂಜಯ ಮುಂದುವರೆಸಿದ.

"ಹದಿನಾರು ವರ್ಷಗಳ ಕೆಳಗೆ ಭುವನೇಶ್ವರದಲ್ಲಿ ಒಂದು ಬ್ಯಾಂಕ್ ದರೋಡೆ ನಡೆಯಿತು. ಸುಮಾರು ಹದಿನಾರು ಕೋಟಿ ರೂಪಾಯಿ ಲೂಟಿ ಅದು. ಸತ್ತ ಈ ರಾಮಲಾಲ್ ಸಾಹು ಆ ಲೂಟಿಯಲ್ಲಿ ಸಿಕ್ಕಿ ಬಿದ್ದಿದ್ದ. ಆದರೆ ಆ ಇಡೀ ಲೂಟಿಯ ಮಾಸ್ಟರ್ ಮೈಂಡ್ ಪೊಲೀಸರಿಗೆ ಸಿಗಲಿಲ್ಲ. ಜೈಲು ಶಿಕ್ಷೆ ಮುಗಿಸಿ ಬಂದ ರಾಮಲಾಲ್‌ಗೆ ಆ ಮಾಸ್ಟರ್ ಮೈಂಡ್ ಬೆಂಗಳೂರಿನಲ್ಲಿದ್ದಾನೆ ಅಂತ ತಿಳಿದು, ಇಲ್ಲಿಗೆ ಬಂದ. ಇಲ್ಲಿ ಆ ಹಳೆಯ ನಂಬರ್‌ಗಳು ಚಾಲನೆಯಲ್ಲಿ ಇಲ್ಲದಿರುವುದರಿಂದ... ಸ್ವಂತ ಹುಡುಕಲು ಪ್ರಾರಂಭಿಸಿದ. ಆ ಮಾಸ್ಟರ್ ಮೈಂಡ್ ಸಿಕ್ಕಾಗ, ತನ್ನ ಪಾಲು ಕೇಳಿದ. ಎಲ್ಲಿ ಲೂಟಿಯ ಪಾಲಿನ ಜೊತೆಗೆ, ಇಲ್ಲಿಯವರೆಗೂ ತಾವು ಗಳಿಸಿದ ಹಣದಲ್ಲಿಯೂ ಪಾಲು ಕೊಡಬೇಕೋ ಅನ್ನುವ ಭಯದಿಂದ, ಆ ಮಾಸ್ಟರ್ ಮೈಂಡ್ ರಾಮ್ ಲಾಲ್‌ನನ್ನು ಸಾಯಿಸಿಬಿಟ್ಟ."

> ಕೇಳಲು ಯಾವ ಪ್ರಶ್ನೆಯೂ ಉಳಿದಿರಲಿಲ್ಲ. ಆದರೆ ಉತ್ತರವಿಲ್ಲದ ಅನೇಕ ಪ್ರಶ್ನೆಗಳು ಮನದಲ್ಲಿದ್ದವು. ರಾಬರಿ ಮಾಡುವುದಕ್ಕೆ ಬಂದು ಕೊಲೆ ಮಾಡಿರೋದಾ, ಅಥವಾ ಮಾಡಿರುವ ಕೊಲೆ ಮುಚ್ಚಿ ಹಾಕೋಕ್ಕೆ ರಾಬರಿ ಅನ್ನೋ ನಾಟಕವೇ?

"ಅಂದರೆ ಈ ಜಯರಾಂನೇನಾ ಆ ಮಾಸ್ಟರ್ ಮೈಂಡ್. ಈ ಕೊಲೆ ದರೋಡೆ ಎಲ್ಲಾ ಅವನೇ ಮಾಡಿಸಿದ್ದಾ?" ಅಲ್ಲಿಯವರೆಗೂ ಸುಮ್ಮನಿದ್ದ ನಿರ್ಮಲ್‌ನ ಪತ್ನಿ ಬಾಯಿ ತೆರೆದಳು.

"ಓಹ್ ಇನ್ನೊಂದು ವಿಷಯ ಹೇಳಲು ಮರೆತಿದ್ದೆ ಮೇಡಂ. ರಾಮಲಾಲ್ ಮಾಡಿದ ಕಾಲ್‌ಗಳಲ್ಲಿ ನಿಮ್ಮ ಹಳೆಯ ನಂಬರ್ ಕೂಡಾ ಇತ್ತು."

ಆಕೆ ಅಲ್ಲಿಯೇ ಇದ್ದ ಸೋಫಾದಲ್ಲಿ ಕುಸಿದಳು.

"ಇದೆಲ್ಲದರ ಮಾಸ್ಟರ್ ಮೈಂಡ್ ನೀವೇ... ನಿರ್ಮಲ್... ಅಲಿಯಾಸ್ ಧರ್ಮೇಂದ್ರ ಸಾಹು... ಹಣಕ್ಕಾಗಿ ನಿಮ್ಮ ಸ್ವಂತ ಅಣ್ಣನನ್ನೇ ಕೊಲೆ ಮಾಡಿದಿರಿ ಅಲ್ಲವಾ?"

ಜಯರಾಂ, ನಿರ್ಮಲ್ ಮತ್ತು ಅವನ ಪತ್ನಿ... ಮೂರೂ ಜನ ಸೋಫಾದಲ್ಲಿ ಕುಸಿದರು.

"ನೀವು ನಾಲ್ಕೂ ಜನ ಸೇರಿ ಬ್ಯಾಂಕ್ ಲೂಟಿ ಮಾಡಿದಿರಿ. ರಾಮ್ ಲಾಲ್ ಸಿಕ್ಕಿಕೊಂಡ. ನೀವು ಹಣದೊಂದಿಗೆ ಪರಾರಿ ಆಗಿ, ಇಲ್ಲಿ ಬಂದು ಸಭ್ಯರಂತೆ ಬದುಕಲು ಪ್ರಾರಂಭಿಸಿದಿರಿ. ನೀವೆಲ್ಲ ಬೆಂಗಳೂರಿನಲ್ಲಿ ಇದೀರಾ ಎಂದು ತಿಳಿದು ಇಲ್ಲಿಗೆ ಬಂದ ರಾಮಲಾಲ್ ನಿಮ್ಮ ನಂಬರ್ ಬದಲಾಗಿದ್ದು